ಕರ್ನಾಟಕ ಸರ್ಕಾರ
ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ
C/o, ನಿರ್ದೇಶನಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಒಂದನೇ ಮಹಡಿ, ಬಹು ಮಹಡಿಗಳ ಕಟ್ಟಡ, ಡಾ॥ ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560001, ಕರ್ನಾಟಕ

**E-mail ID: icps.kar@gmail.com** **Ph.No.080-22879381/82**

ಸಂ:ಕೆಎಸ್ಐಸಿಪಿಎಸ್/ಸಿಎನ್‌ಸಿಪಿ/ಸುತ್ತೋಲೆ/04:2016-17 ದಿನಾಂಕ:02.07.2020

**ಸುತ್ತೋಲೆ**

ವಿಷಯ: ಮಕ್ಕಳ ಸಾಗಾಣಿಕೆದಾರರ ಮೇಲೆ ಪೊಲೀಸ್ ಠಾಣೆಯಲ್ಲಿ ಪ್ರಥಮ ವರ್ತಮಾನ ವರದಿ (ಎಫ್ಐಆರ್) ದಾಖಲಿಸುವ ಬಗ್ಗೆ.

ಉಲ್ಲೇಖ: ದಿನಾಂಕ:01.02.2020 ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಮಹಿಳೆಯರ ಮತ್ತು ಮಕ್ಕಳ ಅಕ್ರಮ ಸಾಗಾಣಿಕೆ ಕುರಿತು ನಡೆದ ಸಭಾ ನಡವಳಿ

*******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ:01.02.2020 ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಮಹಿಳೆಯರ ಮತ್ತು ಮಕ್ಕಳ ಅಕ್ರಮ ಸಾಗಾಣಿಕೆ ಕುರಿತು ನಡೆದ ಸಭೆಯಲ್ಲಿ, ಈ ರೀತಿ ಅಕ್ರಮವಾಗಿ ಮಹಿಳೆಯರು ಮತ್ತು ಮಕ್ಕಳನ್ನು ಸಾಗಾಣಿಕೆ ಮಾಡುವವರ ವಿರುದ್ಧ ಎಫ್ಐಆರ್ ದಾಖಲು ಮಾಡಿಸಲು ತಿಳಿಸಿರುತ್ತಾರೆ. ಸಾಮಾನ್ಯವಾಗಿ ಅಕ್ರಮ ಸಾಗಾಣಿಕೆಯಲ್ಲಿ ಸಿಲುಕಿದ ಮಹಿಳೆಯರ ಹಾಗೂ ಮಕ್ಕಳ ರಕ್ಷಣೆ ಮಾಡಲಾಗುತ್ತಿದ್ದಯೇ ಹೊರತು ಸಾಗಾಣಿಕೆಗೆ ತೊಡಗಿಸಿದವರ ವಿರುದ್ಧ ದೂರು ದಾಖಲೆಯಾಗುತ್ತಿಲ್ಲ.

ಅಕ್ರಮ ಸಾಗಾಣಿಕೆದಾರರ ಮೇಲೆ ಎಫ್ಐಆರ್ ದಾಖಲಿಸುವುದು ಅತಿ ಮುಖ್ಯವಾಗಿದ್ದು, ಸಾಧಾರಣವಾಗಿ **ಅಕ್ರಮ ಸಾಗಾಣಿಕೆಗೆ ಸಿಲುಕಿದ ಮಕ್ಕಳ ರಕ್ಷಣೆಯ ಕಾರ್ಯಾಚರಣೆಯ ಸಂದರ್ಭಗಳಲ್ಲಿ ಮೊದಲನೆಯ ಸಂಪರ್ಕದಲ್ಲಿರುವವರು ಸ್ವಯಂ ಸೇವಾ ಸಂಸ್ಥೆಗಳೇ ಆಗಿರುತ್ತವೆ. ಮೊದಲನೇ ಸಂಪರ್ಕದಲ್ಲಿದ್ದ ಸ್ವಯಂ ಸೇವಾ ಸಂಸ್ಥೆಗಳು ಮಕ್ಕಳ ರಕ್ಷಣಾ ಕಾರ್ಯಾಚರಣೆ ನಡೆದ 24 ಗಂಟೆಗಳೊಳಗಾಗಿ ಅಕ್ರಮ ಸಾಗಾಣಿಕೆದಾರರ ವಿರುದ್ಧ ಎಫ್ಐಆರ್ ದಾಖಲಿಸಬೇಕಾಗಿದ್ದು ಆಚರಣೆಯಲ್ಲಿ ಎಫ್ಐಆರ್ ದಾಖಲಿಸಲು ಹಾಗೂ ಪ್ರಕರಣ ಇತ್ಯರ್ಥವಾಗುವವರೆಗೆ ನ್ಯಾಯಾಲಯಕ್ಕೆ ಪದೇ ಪದೇ ಸಾಕ್ಷಿ ಹೇಳಿಕೆ ನೀಡಲು ಇತ್ಯಾದಿ ಸಲುವಾಗಿ ಓಡಾಡಲು ಆಗುವ ವೆಚ್ಚಗಳನ್ನು ಯೋಚನೆ ಮಾಡಿ ಎಫ್ಐಆರ್ ದಾಖಲಿಸದೇ ಇರುವುದು ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಮೇಲಿನ ಸಭೆಯಲ್ಲಿ ಪರಿಶೀಲಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಅಕ್ರಮ ಸಾಗಾಣಿಕೆಗೆ ಸಿಲುಕಿದ ಮಕ್ಕಳ ರಕ್ಷಣೆಯ ಕಾರ್ಯಾಚರಣೆಯ ಸಂದರ್ಭಗಳಲ್ಲಿ ಮೊದಲನೆಯ ಸಂಪರ್ಕದಲ್ಲಿರುವ ಸ್ವಯಂ ಸೇವಾ ಸಂಸ್ಥೆಗಳನ್ನು ಮಕ್ಕಳ ರಕ್ಷಣಾ ಕಾರ್ಯಾಚರಣೆ ನಡೆದ 24 ಗಂಟೆಗಳೊಳಗಾಗಿ ಅಕ್ರಮ ಸಾಗಾಣಿಕೆದಾರರ ವಿರುದ್ಧ ಎಫ್ಐಆರ್ ದಾಖಲಿಸಲು ಪ್ರೋತ್ಸಾಹಿಸಲು ಅಂತಹ ಸ್ವಯಂ ಸೇವಾ ಸಂಸ್ಥೆಗಳಿಗೆ ಇಲಾಖೆ ವತಿಯಿಂದ ಆರ್ಥಿಕ ನೆರವನ್ನು ನೀಡಲು ಮಾನ್ಯ ಮುಖ್ಯ ಕಾರ್ಯದರ್ಶಿರವರು ಸೂಚಿಸಿರುತ್ತಾರೆ. ಅದರಂತೆ ಈ ಸುತ್ತೋಲೆಯನ್ನು ಹೊರಡಿಸಲಾಗುತ್ತಿದೆ.**

ಹೀಗಾಗಿ NGO ರವರು ಮಕ್ಕಳ ಸಾಗಾಣಿಕೆದಾರರ ವಿರುದ್ಧ ಎಫ್ಐಆರ್ ದಾಖಲಿಸಲು ಹಾಗೂ ಪ್ರಕರಣದ ಬಗ್ಗೆ ನ್ಯಾಯಾಲಯದಿಂದ ಅಂತಿಮ ಆದೇಶವಾಗುವವರೆಗೆ ಅನುಸರಣೆ ಮಾಡಲು, ಪ್ರಕರಣದಲ್ಲಿ ಸಾಕ್ಷಿಯಾಗಿ ನ್ಯಾಯಾಲಯಕ್ಕೆ ಹಾಜರಾದ ಸಂದರ್ಭಗಳಲ್ಲಿ ಪ್ರಯಾಣಕ್ಕಾಗಿ ತಗಲುವ ವೆಚ್ಚವನ್ನು ಸ್ವಯಂ ಸೇವಾ ಸಂಸ್ಥೆಯವರಿಗೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಾಮಾನ್ಯ ಪ್ರಯಾಣ (Non Luxury Travel Cost) ವೆಚ್ಚದಡಿ/ಸಾದಿಲ್ವಾರು ವೆಚ್ಚದಡಿ ಭರಿಸಲು ಈ ಕೆಳಕಂಡಂತೆ ಕ್ರಮವಹಿಸುವುದು.

1. ಸ್ಥಳೀಯ ಸಾಧನಗಳಾದ ಬಸ್, ಟೆಂಪೋ, ಆಟೋಗಳಲ್ಲಿ ಕೋವಿಡ್-19 ಇರುವ ಪ್ರಯುಕ್ತ ಸಾಮಾಜಿಕ ಅಂತರ ಕಾಪಾಡಿಕೊಂಡು ಮಕ್ಕಳನ್ನು ಕರೆತರುವುದು. ಈ ಸಂಬಂಧ ಎನ್‌ಜಿಓ ರವರಿಂದ ಓಚರ್ ಪಡೆಯುವುದು.

REDMI NOTE 8
AI QUAD CAMERA

2. ರಿಮೋಟ್ ಏರಿಯಾ ಆಗಿದ್ದಲ್ಲಿ, ಖಾಸಗಿ Non Luxury ವಾಹನಗಳಲ್ಲಿ ಸರ್ಕಾರ ನಿಗಧಿ ಪಡಿಸಿದ ದರದಲ್ಲಿ ಮೀರದಂತೆ ಪ್ರಯಾಣಿಸಬಹುದು. ಈ ಸಂಬಂಧ ಎನ್‌ಜಿಓ ರವರಿಂದ ಓಚರ್ ಪಡೆಯುವುದು.

3. ಕಾರ್ಪೋರೇಷನ್/ನಗರ/ಮುನ್ಸಿಫಾಲ್ ನಂತಹ ಸ್ಥಳೀಯ ಪ್ರದೇಶಗಳಲ್ಲಿ, ಆಟೋ/ಕ್ಯಾಬ್ ಸೇವೆಯನ್ನು ಬಳಸಬಹುದಾಗಿದೆ. ಈ ಸಂಬಂಧ ಎನ್‌ಜಿಓ ರವರಿಂದ ಓಚರ್ ಪಡೆಯುವುದು.

ಈ ಸಂಬಂಧ ಎಲ್ಲಾ ವೆಚ್ಚಗಳನ್ನು ಪ್ರಚಲಿತದಲ್ಲಿರುವ ಎಲ್ಲಾ ಸಂಬಂಧಪಟ್ಟ ಆರ್ಥಿಕ ನಿಯಮಗಳ ಅನ್ವಯ ಮಾತ್ರ ಮಾಡುವುದು ಹಾಗೂ ಓಚರ್ ಇತ್ಯಾದಿ ಲೆಕ್ಕಪತ್ರಗಳನ್ನು ಸಹಾ ಸದರಿ ನಿಯಮಗಳನ್ವಯ ನಿರ್ವಹಿಸುವುದು.

03.07.2020

ನಿರ್ದೇಶಕರು
ಸಮಗ್ರ ಮಕ್ಕಳ ರಕ್ಷಣಾ ಯೋಜನೆ
ಬೆಂಗಳೂರು.

ಪ್ರತಿಗಳು:

1. ಅಧ್ಯಕ್ಷರು ಮತ್ತು ಸದಸ್ಯರು, ಮಕ್ಕಳ ಕಲ್ಯಾಣ ಸಮಿತಿ, ಎಲ್ಲಾ ಜಿಲ್ಲೆಗಳು ಇವರಿಗೆ ಮಾಹಿತಿಗಾಗಿ
2. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಎಲ್ಲಾ ಜಿಲ್ಲೆಗಳು
3. ಅಧೀಕ್ಷಕರು, ಬಾಲಕರ/ಬಾಲಕಿಯರ ಬಾಲಮಂದಿರ, ಎಲ್ಲಾ ಜಿಲ್ಲೆಗಳು ಇವರಿಗೆ ಮಾಹಿತಿಗಾಗಿ